ಪ್ರೋಹಿಬಿಷನ್ ಕಾಯ್ದೆಗೆ ನಿಯಮಾಳಿಗಳನ್ನು ರೂಪಿಸುವುದು.

318 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ?

ಆ) ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ?

ಇ) ಪ್ರೋಹಿಬಿಷನ್ ಕಾಯ್ದೆಗೆ ನಿಯಮಾವಳಿಗಳನ್ನು ರೂಪಿಸಲಾಗಿದೆಯೇ?

ಈ) ರೂಪಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಉ) ಎಷ್ಟು ಅವಧಿಯೊಳಗಾಗಿ ಈ ಕಾಯ್ದೆಗೆ ನಿಯಮಗಳನ್ನು ರೂಪಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ರಾಜ್ಯದಲ್ಲಿ ಪಾನನಿರೋಧವನ್ನು ಪುನಃ ಜಾರಿಗೊಳಿಸಲು ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿದೆ. ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಆ) ಸಾಧಕ ಬಾಧಕಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) -ಇಲ್ಲ-

ಈ) ಪಾನನಿಷೇಧ ಕಾಯ್ದೆ 1961ರ ಸೆಕ್ಷನ್ 1,2 ಮತ್ತು 15 ಪ್ರಸ್ತುತ ಜಾರಿಯಲ್ಲಿ ಇರುವ ಕಾರಣ.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.

ಹೊಸ ಉಪಪೋಲೀಸ್ ಠಾಣೆ ತೆರೆಯುವುದು.

319 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಹೊಸ ಪೋಲೀಸ್ ಠಾಣೆಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆ (ಸ್ಥಳವಾರು ವಿವರಗಳು ನೀಡುವುದು);

ಆ) ಶಿಡ್ಲಘಟ್ಟ ತಾಲ್ಲೂಕಿನ ಹೆಚ್ ಕ್ರಾಸ್‌ನಲ್ಲಿ ಒಂದು ಹೊಸ ಠಾಣೆಯನ್ನು ತೆರೆಯಲಾಗುತ್ತಿದೆ;

ಇ) ರಾಜ್ಯದಲ್ಲಿನ ಎಷ್ಟು ಉಪ ಠಾಣೆಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು. (ಸ್ಥಳವಾರು ವಿವರಗಳನ್ನು ನೀಡುವುದು.)

ಈ) ಆ ಪೈಕಿ ಶಿಡ್ಲಘಟ್ಟ ತಾಲ್ಲೂಕಿನ ಜಂಗಮ ಕೋಟೆಯ ಉಪ ಠಾಣೆಯನ್ನು ಮೇಲ್ದರ್ಜೆಗೆರಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 1995-96ನೇ ಸಾಲಿನಲ್ಲಿ 2 ಹೊಸ ಪೋಲೀಸ್ ಠಾಣೆಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿದೆ. ಸ್ಥಳಗಳನ್ನು ಇನ್ನು ನಿರ್ಧರಿಸಿಲ್ಲ.

ಆ) -ಇಲ್ಲ-

ಇ) ಇನ್ನೂ ಅಂತಿಮ ತೀರ್ಮಾನವಾಗಿಲ್ಲ.

ಈ) -ಇಲ್ಲ-

ಅಬಕಾರಿ ಮತ್ತು ವಾಣಿಜ್ಯ ತೆರಿಗೆ ಕುರಿತು.

320 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಹಣಕಾಸು ವರ್ಷದಲ್ಲಿ ಜನವರಿ 31ರ ವೇಳೆಗೆ ರಾಜ್ಯದಲ್ಲಿ ಸಂಗ್ರಹಿಸಲಾದ ಅಬಕಾರಿ ತೆರಿಗೆ, ವಾಣಿಜ್ಯ ತೆರಿಗೆ ಎಷ್ಟು?

ಆ) ಕಳೆದ 3 ವರ್ಷಗಳ ಇದೇ ಅವಧಿಗೆ ಹೋಲಿಸಿದರೆ ಆಗುವ ಹೆಚ್ಚಳ ಎಷ್ಟು,

ಇ) ರೆಗ್ಯುಲೇಟೆಡ್ ಮಾರುಕಟ್ಟೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ತೆರಿಗೆ ಸೋರುವಿಕೆ ನಡೆದಿರುವುದು ಸರ್ಕಾರದ ಗಮನಕೆ ಬಂದಿದೆಯೇ,

ಈ) ಈ ಸೋರುವಿಕೆ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು,

ಉ) ಈ ಕ್ರಮಗಳಿಂದಾದ ಪರಿಣಾಮಗಳೇನು?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಅಬಕಾರಿ ತೆರಿಗೆ - ರೂ. 0180.40 ಕೋಟಿಗಳು

ವಾಣಿಜ್ಯ ತೆರಿಗೆ - ರೂ. 2724.96 ಕೋಟಿಗಳು